# ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.

## ಸಿ.ಸಿ. ಸಂಖ್ಯೆಃ 491/2023

**ಹೆಸರುಃ** ಡಾ. ವೆಂಕಟರಾಮು **ಪಿಡಬ್ಲ್ಯೂ–07 ಸಿಡಬ್ಲ್ಯೂ–07**

**ತಂದೆಃ** ಚಿಕ್ಕ ನರಸಯ್ಯ

**ವಯಸ್ಸುಃ** 60 ವರ್ಷ

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾದ ದಿನಾಂಕಃ** 10.03.2026

**ಕೆಲಸಃ** ವೈದ್ಯಾಧಿಕಾರಿ, ಜಿಲ್ಲಾ ಆಸ್ಪತ್ರೆ, ಮೈಸೂರು.

**ವಾಸಸ್ಥಳಃ** ಮೈಸೂರು.

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದB**

ನಾನು 2016 ಸೆಪ್ಟೆಂಬರ್ ತಿಂಗಳಿನಿಂದ ಜುಲೈ 2025ರವರೆಗೆ ಹುಣಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 03.07.2023 ರಂದು ಸಂಜೆ 4.45 ಗಂಟೆಗೆ ಚಾಸಾ–2 ರವರು ಹಲ್ಲೆಗೆ ಒಳಗಾದ ಹಿನ್ನಲೆಯಲ್ಲಿ ಚಿಕಿತ್ಸೆಗೆ ನನ್ನ ಮುಂದೆ ಹಾಜರಾಗಿದ್ದು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಎಡ ಭುಜದಲ್ಲಿ ನೋವಿತ್ತು.
2. ಹಣೆಯ ಎಡಭಾಗದಲ್ಲಿ ನೋವು ಮತ್ತು ಮುಟ್ಟಿದರೆ ನೋವಿತ್ತು.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ 2 ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಆ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಈಗಾಗಲೇ ನಿಪಿ–5 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ–5 ಬಿ ಎಂದು ಗುರುತಿಸಲಾಯಿತು. ಒಬ್ಬ ವ್ಯಕ್ತಿಗೆ ಮುಮಾ–

1 ರ ಕಲ್ಲಿನಿಂದ ಹಲ್ಲೆ ಮಾಡಿದರೆ ನಿಪಿ–5 ರಲ್ಲಿ ನಮೂದಿಸಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಸ್.ಜಿ. ವಕೀಲರಿಂದಃ**

ಆರೋಪಿತರು ಹಾಜರಿದ್ದು ಕಾಲಾವಕಾಶ ಕೋರಿದ್ದು ಸೂಕ್ತ ಕಾರಣವನ್ನು ನೀಡದೇ ಇರುವ ಕಾರಣ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಹುಣಸೂರು.